4 ಬಹುತೇಕ ಸಮಯದಲ್ಲಿ ಡೆಡ್‌ಲೈನಿನ ಒಳಗೆ ಕೆಲಸ ಮುಗಿಸುವೆ. ಆ ಕಲೆ ಅನುಭವದಿಂದ ಬರುವಂತಹದ್ದು. ಕೆಲವೊಮ್ಮೆ ತಳಮಳ, ಒತ್ತಡವಿದ್ದರೂ ಡೆಡ್‌ಲೈನ್ ಮೀರದಂತೆ ನೋಡಿಕೊಳ್ಳುತ್ತೇನೆ. ಅದಕ್ಕೆ ಕಾರಣ ಮೂರು ಸಾವಿರ ಹಾಡು ಬರೆದ ಅನುಭವ.

5 ನಾನು ಬರೆದ ಹಾಡಿನಿಂದ ಯಾರೋ ಒಬ್ಬರಿಗೆ ಭಾವೋದ್ದೀಪನ ಅಥವಾ ರಸಾನುಭೂತಿ ಆಗಿ ಅದನ್ನು ಅವರು ಪ್ರಸ್ತಾಪಿಸಿದಾಗ ಸಂತೋಷವಾಗುತ್ತದೆ. ನನ್ನ ಹಾಡಿನಿಂದ ಯಾವುದೋ ವ್ಯಕ್ತಿಯಲ್ಲಿ ಸಣ್ಣ ಬದಲಾವಣೆಯಾದರೆ ಅದು ಇನ್ನಷ್ಟು ಖುಷಿ ಕೊಡುತ್ತದೆ. ಉದಾಹರಣೆಗೆ, ‘ಅಮ್ಮ ಐ ಲವ್ ಯು, ಅಪ್ಪ ಐ ಲವ್ ಯು’, ‘ನೀನೆ ರಾಮ ನೀನೆ ಶಾಮ’, ‘ಹರಕೆಯ ಕುದುರೆಯಾಗಿ’ ಹಾಡುಗಳು. ಯಾರೋ ಒಬ್ಬರು ಫೋನ್ ಮಾಡಿ, ‘ನನ್ನ ತಾಯಿಯನ್ನು ನಾನು ಅಷ್ಟೊಂದು ಹಚ್ಚಿಕೊಳ್ಳುತ್ತಾ ಇರಲಿಲ್ಲ. ನಿಮ್ಮ ಹಾಡು ಕೇಳಿದ ಬಳಿಕ ಹಚ್ಚಿಕೊಳ್ಳುತ್ತಾ ಇದ್ದೀನಿ’ ಅಂತಾರೆ. ಮತ್ತೊಬ್ಬರು, ‘ಇಷ್ಟು ದಿನ ನನ್ನ ತಂದೆಯನ್ನು ಮಿಸ್ ಮಾಡಿಕೊಂಡಿದ್ದೆ. ಅವರ ಜೊತೆ ಮಾತಾಡುತ್ತಿರಲಿಲ್ಲ. ‘ಅಪ್ಪ ಐ ಲವ್ ಯು’ ಹಾಡು ಕೇಳಿದ ಬಳಿಕ ಮಾತಾಡ್ತಾ ಇದೀನಿ’ ಅಂತ ಹೇಳ್ತಾರೆ. ‘ನೀನೆ ರಾಮಾ ನೀನೆ ಶಾಮ’ ರೀತಿಯ ಹಾಡುಗಳು ಹೇಳಲಾಗದ ಅನುಭೂತಿಗಳು. ಆ ಇಡೀ ಹಾಡನ್ನು ಇಟ್ಟುಕೊಂಡು ಪಿಎಚ್.ಡಿ. ರೀತಿಯಲ್ಲಿ ಹಾಡಿನ ಪ್ರತಿ ಸಾಲುಗಳ ಒಳಾರ್ಥ ಬರೆದುಕಳುಹಿಸಿದ್ದಾರೆ ಕೆಲವರು. ಅವೆಲ್ಲ ಒಬ್ಬ ಮನುಷ್ಯನ ಅಂತರ್ಮುಖದ ಬದಲಾವಣೆಗಳು. ಅವು ಅಮೂರ್ತವಾಗಿರುತ್ತವೆ. ಜನ ಖುಷಿ ಪಟ್ಟಾಗ, ತಬ್ಬೊಂಡು ಅತ್ತಾಗ, ಮೆಚ್ಚುಗೆ ವ್ಯಕ್ತಪಡಿಸಿದಾಗ ಸಂತೋಷವಾಗುತ್ತದೆ.

6 ಸಾವಿರಾರು ಹಾಡುಗಳನ್ನು ಬೆರಳೆಣಿಕೆಯಲ್ಲಿ ಹೇಳಿದರೆ ತಪ್ಪಾಗುತ್ತೆ. ಇಲ್ಲಿಯವರೆಗಿನ ಎಲ್ಲ ಗೀತರಚನಕಾರರ ಅನೇಕ ಹಾಡುಗಳು ಬೇರೆ ಬೇರೆ ಕಾರಣಕ್ಕೆ ಅತ್ಯುತ್ತಮವಾಗಿವೆ. ಭಾಷೆಯ ಸೌಂದರ್ಯ ಹೆಚ್ಚಿಸಿದಕ್ಕೆ, ಸಿನಿಮಾಗಳ ಅಂತರ್‌ಸತ್ವ ಹೆಚ್ಚಿಸಿದಕ್ಕೆ, ಸಮಾಜದಲ್ಲಿ ಬದಲಾವಣೆ ತಂದಿದ್ದಕ್ಕೆ, ಹೊಸ ಪ್ರಯೋಗ ಮಾಡಿದಕ್ಕೆ, ಹೊಸ ಟ್ರೆಂಡ್ ಹುಟ್ಟು ಹಾಕಿದಕ್ಕೆ ಎಲ್ಲ ಕಾಲಘಟ್ಟಗಳಲ್ಲೂ ಅವರ ಹಾಡುಗಳು ಇಷ್ಟ.

7 ಎಲ್ಲರೂ ಅವರವರ ಜ್ಞಾನದ, ಅನುಭವದ, ಶಕ್ತಿಯ ಅಳತೆಗೆ ತಕ್ಕಂತೆ ಚೆನ್ನಾಗಿಯೇ ಕೆಲಸ ಮಾಡುತ್ತಿದ್ದಾರೆ. ಕಸುಬಿನ ದೃಷ್ಟಿಯಿಂದ ಅವರೆಲ್ಲರೂ ಮುಖ್ಯ. ಇವರು ಸುಮಾರಾಗಿ ಬರೆಯುತ್ತಾರೆ, ಅವರು ಚೆನ್ನಾಗಿ ಬರೆಯುತ್ತಾರೆ ಅಂತೇನಿಲ್ಲ. ಎಲ್ಲರೂ ಚೆನ್ನಾಗಿ ಬರೆಯುತ್ತಾರೆ. ನಮಗೆ ಇರುವ ಅನಿವಾರ್ಯತೆ ಅಂದರೆ ಪ್ರತಿ ಹಾಡನ್ನು ಪ್ರೂವ್ ಮಾಡಬೇಕಾಗುತ್ತದೆ. ಅದರರ್ಥ ಸಕ್ಸಸ್ ಆದರೆ ಮಾತ್ರ ಪ್ರೂವ್ ಮಾಡಿದಂತಲ್ಲ. ಆ ಟ್ಯೂನ್‌ಗೆ, ನಿರ್ದೇಶಕನಿಗೆ ಏನ್ ಬೇಕು ಅದನ್ನು ಕೊಡುವುದೇ ಸವಾಲು ಹಾಗೂ ಅನಿವಾರ್ಯ. ಪ್ರತಿ ಬಾರಿಯು ನಾವು ಅದನ್ನು ಪ್ರೂವ್ ಮಾಡಬೇಕಾಗುತ್ತದೆ.

8 ತುಂಬಾ ಇವೆ. ಎಲ್ಲ ಹಾಡುಗಳು ಅದೇ ರೀತಿ ಅನಿಸುತ್ತವೆ. ಇನ್ನೂ ಏನೋ ಬರೆಯಬಹುದಿತ್ತು. ಇಡೀ ಹಾಡು ಹಾಗೆ ಅನಿಸುತ್ತದೆ ಅಂತಲ್ಲ. ಎಲ್ಲ ಹಾಡುಗಳೂ ಅದ್ಭುತವಾಗಿವೆ ಅನಿಸುತ್ತದೆ. ಎಲ್ಲೊ ಒಂದೆರೆಡು ಸಾಲುಗಳು ಸಾಧಾರಣವಾಗಿ ಗೀಚಿದಂತಿವೆ ಅನಿಸುವುದುಂಟು. ●